**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**Crl. Misc. 231/2019**

| | | |
|---|---|---|
| ಸಾಕ್ಷಿದಾರರ ಹೆಸರು | : ಮಹಮ್ಮದ್ ಫಾಜಿಲ್ | ***P.W-5*** |
| ತಂದೆಯ ಹೆಸರು | : ಅಬ್ದುಲ್ ಮಜೀದ್ | |
| ವಯಸ್ಸು | : 43 ವರ್ಷ | |
| ಉದ್ಯೋಗ | : ಟೈಲ್ಸ್ ಕೆಲಸ ಮತ್ತು ಮಸೀದಿ ಅಧ್ಯಕ್ಷ | |
| ವಾಸ | : ಶಿವಮೊಗ್ಗ | |

**ದಿನಾಂಕಃ 22-07-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ**

ಸದ್ರಿ ಶಿವಮೊಗ್ಗ ಜಿಲ್ಲೆಯ ಅದೇ ನಗರದ ಬೊಮ್ಮನಕಟ್ಟೆಯಲ್ಲಿರುವ ಮಸೀದಿ ಅದರ ಹೆಸರು ಹಜರತ್ ಸಲ್ಮಾನ್ ಪಾರ್ಸಿ ರಜಿಯಲ್ಲತಾಲಾಅನ್ಹು ಮಸ್ಜಿದ್ ಮತ್ತು ಮದರಸಾ, ಶಿವಮೊಗ್ಗ ಅದಕ್ಕೆ ನಾನು ಕಳೆದ 12 ವರ್ಷಗಳಿಂದ ಅಧ್ಯಕ್ಷನಾಗಿರುತ್ತೇನೆ. ನಿಪಿ-1 ದಾಖಲೆ ನಿಖಾನಾಮಾಗೆ ಸಂಬಂಧಿಸಿದಂತೆ ನಮ್ಮ ಮಸೀದಿಯಿಂದ ಕೊಟ್ಟ ದಾಖಲೆಯಾಗಿರುತ್ತದೆ. ಅದು ಮಸೀದಿಯಲ್ಲಿ ನೋಂದಣಿಯಾದ ದಾಖಲೆಯಾಗಿದ್ದು, ಅದರ ಪ್ರಕಾರ ದಿನಾಂಕ 12-05-2016 ರಲ್ಲಿ ಮುನೀರ ಅಹ್ಮದ್ ಈತನ ಜೊತೆಗೆ ನಸ್ರುನ್ನಿಸಾರವರ ವಿವಾಹ ಆಗಿದೆ. ಆ ದಾಖಲೆ ಮೇಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ದಾಖಲೆ ಮೇಲೆ ವಧುವಿನ ಒಂದು ಸಹಿ ಮತ್ತು ವರನ 2 ಸಹಿ ಮಾಡಿಸುತ್ತೇವೆ. ವರನ 2 ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ವಧುವಿನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸದ್ರಿ ದಾಖಲೆಯನ್ನು ದಿನಾಂಕ 12-05-2016 ರಲ್ಲಿ ನೀಡಿರುತ್ತೇನೆ.

ಎದುರುದಾರನು ತನಗೆ ಬೇರೆ ಯಾವುದೇ ಮದುವೆಯಾಗಿಲ್ಲ ಅಂತ ಹೇಳಿ ಈ ಮದುವೆಯಾಗಿದ್ದು ಇರುತ್ತದೆ. ಸದ್ರಿ ದಾಖಲೆ ನಮ್ಮ ಮಸೀದಿಯಲ್ಲಿ ನೋಂದಾಗಿರುತ್ತದೆ. ನಿಪಿ-1 ದಾಖಲೆಯನ್ನು 10 ವರ್ಷಗಳ ಹಿಂದೆ ನಾನೇ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ವಕೀಲರಿಂದಃ**

ನಮ್ಮ ಮಸೀದಿ ಕಮೀಟಿ ಅದು ವಕ್ಫ ಬೋರ್ಡ ಅಡಿಯಲ್ಲಿ ನೋಂದಣಿಯಾಗಿಲ್ಲ ಆದರೆ ಅದು ಟ್ರಸ್ಟ ಅಡಿಯಲ್ಲಿ ನೋಂದಣಿಯಾಗಿರುತ್ತದೆ. ನಿಪಿ-1 ರ ಮೇಲೆ ನಮ್ಮ ಕಮೀಟಿ ನೋಂದಣಿಯಾದ ಕುರಿತು ಯಾವುದೇ ಮೊಹರು ಇರುವುದಿಲ್ಲ. ನಮ್ಮ ಟ್ರಸ್ಟ 2012 ರಲ್ಲಿ ನೋಂದಣಿಯಾಗಿರುತ್ತದೆ. ಸದ್ರಿ ನಮ್ಮ ಟ್ರಸ್ಟ ಡೀಡ್‌ನಲ್ಲಿ ಮದುವೆ ಮಾಡಿಸಬಹುದು ಎಂದು ಇದೆ. ಸದ್ರಿ ಟ್ರಸ್ಟ ಡೀಡ್ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ತೆಗೆದುಕೊಂಡು ಬಂದಿಲ್ಲ.

ಸಾಕ್ಷಿ ನ್ಯಾಯಾಲಯದ ಆದೇಶದ ಪ್ರಕಾರ ಮದುವೆ ರಿಜಿಸ್ಟರ್ ದಾಖಲೆ ಮತ್ತು ತನ್ನ ಟ್ರಸ್ಟ ಡೀಡ್ ದಾಖಲೆಗಳನ್ನು ತರುವ ಬಗ್ಗೆ ತನಗೆ ಮಾಹಿತಿ ಇರದ ಕಾರಣ ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ತೆಗೆದುಕೊಂಡು ಬಂದಿಲ್ಲ. ಕಾರಣ ಕಾಲಾವಕಾಶ ಕೊಟ್ಟರೆ ಹಾಜರುಪಡಿಸುವುದಾಗಿ ಕೋರಿರುತ್ತಾರೆ. ಆ ಕಾರಣಕ್ಕಾಗಿ ಸಾಕ್ಷಿಯ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.

A.2 and 4 present.

A.1, 3 and 5 absent. EP filed. Allowed.

CW.4 and 13 present examined as PW.10 and 11 got marked Ex.P-4(b).

After declaring PW.10 as hostile. APP cross examined PW.10 fully.

Defence counsel fully cross examined PW.11.

Prosecution given up CW-12.

Issue S/S to CW.7 and 15 by -10-2024

**2nd Addl. Senior Civil Judge & JMFC, Ranebennur.**

**-2-** **C.C No. /20**

**P.W-1**